**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ**

**ಸಿ ಸಿ ನಂ. 230/2021**

**ಚಾ.ಸಾ.** 9

**ಪ್ರಾ.ಸಾ.** 5

**ದಿನಾಂಕಃ 12.03.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ವಿಜಯ ಬಿರಾದರ |
| ತಂದೆಃ ಗಂಡನ ಹೆಸರು | ಬಸನಗೌಡ |
| ಉದ್ಯೋಗ | ಡಿ ಎಸ್ ಪಿ ಕರ್ನಾಟಕ ಲೋಕಾಯುಕ್ತ |
| ವಯಸ್ಸು | 49 ವರ್ಷ |
| ವಾಸಸ್ಥಳ | ಗದಗ |

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದ**

ದಿಃ 26.07.2017 ರಿಂದ ದಿಃ 18.01.2021 ರವರೆಗೆ ಕಲಘಟಗಿ ಪೊಲೀಸ ಠಾಣೆ ಆರಕ್ಷಕ ನಿರೀಕ್ಷಕ ಎಂದು ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ 03.04.2020 ರಂದು ಚಾಸಾ-8 ರವರಿಂದ ಕಡತವನ್ನು ಪಡೆದುಕೊಂಡು ಮುಂದಿನ ತನಿಖೆಯನ್ನು ಮಾಡಿರುತ್ತೇನೆ. ದಿಃ 07.04.2020 ರಂದು ಈ ಪ್ರಕರಣದಲ್ಲಿ ಜಪ್ತಾದ ಮುದ್ದೆಮಾಲನ್ನು ಚಾಸಾ-6 ರವರ ಮೂಲಕ ರಾಸಾಯನಿಕ ಪರೀಕ್ಷೆಗಾಗಿ ಧಾರವಾಡ ಎಫ್ ಎಸ್ ಎಲ್ ರವರಿಗೆ ಕಳುಹಿಸಿರುತ್ತೇನೆ. ದಿಃ 08.04.2020 ರಂದು ಚಾಸಾ-6 ರವರ ಹೇಳಿಕೆಯನ್ನು ಪಡೆದಿರುತ್ತೇನೆ.

ದಿಃ 30.06.2020 ರಂದು ಧಾರವಾಡ ಎಫ್ ಎಸ್ ಎಲ್ ರವರಿಂದ ವರದಿಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 30.12.2020 ರಂದು ಪ್ರಕರಣದ ಆರೋಪಿತರ ವಿರುದ್ಧ ಸಾಬೀತು ಆದ ಕಾರಣ ದೋಷಾರೋಪಣ ಪತ್ರವನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಸಾಕ್ಷಿಯು ಎಫ್ ಎಸ್ ಎಲ್ ರವರಿಗೆ ಕಳುಹಿಸಿದ ನಿವೇದನಾ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ9 ಎಂದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ9(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ವಸ್ತು ಸೂಚನಾ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ10 ಎಂದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ10(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ಮಾಲುಪಟ್ಟಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ11 ಎಂದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ11(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ಎಫ್ ಎಸ್ ಎಲ್ ರವರಿಂದ ಪಡೆದ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ12 ಎಂದು, ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ12(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮುದ್ದೆಮಾಲನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಒಟ್ಟು ಮು.ಮಾ.1 ಎಂದು ಗುರುತಿಸಲಾಗಿದೆ.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ವ್ಯಕ್ತಿಯನ್ನು ನೋಡಿ ಗುರುತಿಸಿದ್ದು, ಸದರಿ ವ್ಯಕ್ತಿಗಳ ಹೆಸರು ಗಿರಿಮಲ್ಲಯ್ಯ ಕಂಬಿ ಮತ್ತು ರವಿ ಭಜಂತ್ರಿ ಎಂದು ಈ ಪ್ರಕರಣದ ಆರೋಪಿತರು ಎಂದು ಗುರುತಿಸಿರುತ್ತಾರೆ.

**ಪಾಟೀ ಸವಾಲುಃ 1 ನೇ ಅಪಾದಿತನ ಪರ ಶ್ರೀ ಎಸ್ ಎಸ್ ಡಿ ವಕೀಲರಿಂದ**

ಈ ಪ್ರಕರಣದಲ್ಲಿ ಶೋಧನಾ ವಾರಂಟನ್ನು ಪಡೆದುಕೊಂಡಿರುವ ಬಗ್ಗೆ ಅಂತಿಮ ವರದಿಯಲ್ಲಿ ನಾನು ನಮೂದು ಮಾಡಿಲ್ಲ. ಸಾಕ್ಷಿಯು ಮುಂದುವರೆದು ಆರೋಪಿತರು ಬೈಲು ಜಾಗದಲ್ಲಿ ಸಿಕ್ಕಿದ್ದ ಕಾರಣ

ಚಾಸಾ-1 ರವರು ಶೋಧನಾ ವಾರಂಟನ್ನು ಮಾನ್ಯ ನ್ಯಾಯಾಲಯದಿಂದ ಪಡೆದುಕೊಂಡಿಲ್ಲ. ಗುನ್ಹಾ ಸ್ಥಳವು ಒಂದು ಸಾರ್ವಜನಿಕ ಸ್ಥಳ ಇತ್ತು ಎಂದರೆ ಸರಿ. ಈ ಪ್ರಕರಣದ ಆರೋಪಿಗೂ ಮತ್ತು ಮು.ಮಾ1 ರಲ್ಲಿರುವ ಮುದ್ದೆಮಾಲಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ದೊರೆತ ಎಲ್ಲಾ ಮುದ್ದೆಮಾಲನ್ನು ಎಫ್ ಎಸ್ ಎಲ್ ರವರಿಗೆ ಕಳುಹಿಸಿದೆ. ಸ್ಥಳದಲ್ಲಿ ಸಾರ್ವಜನಿಕರ ಹೇಳಿಕೆಯನ್ನು ಪಡೆದಿಲ್ಲ ಎಂದರೆ ಸಾಕ್ಷಿಯು ತನಿಖಾ ಕಾಲದಲ್ಲಿ ಗುನ್ಹಾ ಸ್ಥಳದಲ್ಲಿ ದಾಳಿಯ ದಿನ ಹಾಜರು ಇದ್ದ ಸಾರ್ವಜನಿಕರು ಲಭ್ಯವಾಗದ ಕಾರಣ ನಾನು ಯಾವುದೇ ಹೇಳಿಕೆಯನ್ನು ಪಡೆದುಕೊಂಡಿಲ್ಲ. ಚಾಸಾ-1 ರವರು ನೀಡಿದ ದೂರನ್ನು ಪಡೆದುಕೊಂಡು ಯಾವುದೇ ಸಾಕ್ಷ್ಯಧಾರಗಳು ಸಿಗದೇ ಇದ್ದರು ಕೂಡ 1 ನೇ ಆರೋಪಿಯನ್ನು 5 ತಿಂಗಳ ನಂತರ ಈ ಪ್ರಕರಣದ ಅಂತಿಮ ವರದಿಯಲ್ಲಿ ಸೇರಿಸಲಾಗಿದೆ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಠಾಣೆಯ ಅಂಕೆ ಸಂಖ್ಯೆಯ ಸಲುವಾಗಿ ಈ ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ನೇ ಅಪಾದಿತನ ಪರ ಶ್ರೀ ಸಿ ಬಿ ಡಿ ವಕೀಲರಿಂದ**

ಗುನ್ಹಾ ಸ್ಥಳವು ಒಂದು ಬೈಲು ಜಾಗ ಇದ್ದ ಕಾರಣ ಚಾಸಾ-1 ರವರು ಮಾನ್ಯ ನ್ಯಾಯಾಲಯದಿಂದ ಯಾವುದೇ ಶೋಧನಾ ವಾರಂಟನ್ನು ಪಡೆದುಕೊಂಡಿಲ್ಲ. ಈ ಪ್ರಕರಣದಲ್ಲಿ ನಾನು ಸಂಪೂರ್ಣವಾಗಿ ತನಿಖೆಯನ್ನು ಮಾಡಿಲ್ಲ ಎಂದರೆ ಸರಿ. ಆದ ಕಾರಣ ಈ ಪ್ರಕರಣದ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಎಫ್ ಎಸ್ ಎಲ್ ರವರಿಗೆ ಮುದ್ದೆಮಾಲನ್ನು ಕಳುಹಿಸುವ ಪೂರ್ವದಲ್ಲಿ ದೊರೆತ ಮುದ್ದೆಮಾಲಿನಿಂದ ಪ್ಲಾಸ್ಟಿಕ್ ಪಾಕೇಟ ಪ್ರಮಾಣವನ್ನು ಪರಿಶೀಲಿಸಿದ್ದಿರಾ ಎಂದರೆ ಸಾಕ್ಷಿಯು ಚಾಸಾ-1 ರವರು ಜಪ್ತು ಪಡಿಸಿಕೊಂಡಿದ್ದ ಮುದ್ದೆಮಾಲನ್ನು ಎಫ್ ಎಸ್ ಎಲ್ ಗೆ ಕಳುಹಿಸುವ ಮೊದಲು ತೆಗೆದು ಪರಿಶೀಲಿಸುವ ಅವಕಾಶ ಇಲ್ಲದ ಕಾರಣ ಅವುಗಳ ಪ್ರಮಾಣಗಳನ್ನು ಪರಿಶೀಲಿಸಿಲ್ಲ ಎಂದು ನುಡಿಯುತ್ತಾರೆ. ಚಾಸಾ-1 ರವರು ಫಿರ್ಯಾದಿದಾರರು ಸದರಿಯವರಿಗೆ ಮುದ್ದೆಮಾಲನ್ನು ತೆಗೆದು ಜಪ್ತು ಮಾಡುವ ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ.

ದೊರೆತ ಮುದ್ದೆಮಾಲನ್ನು 5 ದಿನಗಳ ಕಾಲ ತಡವಾಗಿ ಎಫ್ ಎಸ್ ಎಲ್ ರವರಿಗೆ ಕಳುಹಿಸಿದ ಕಾರಣ ಸದರಿ ಮುದ್ದೆಮಾಲಿನಲ್ಲಿರುವ ರಾಸಾಯನಿಕ ಪ್ರಕ್ರಿಯೇ ಬದಲಾವಣೆಯಾಗಿರುತ್ತದೆ ಎಂದರೆ

ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಮುಮಾ 1 ರಲ್ಲಿರುವ ಪಾಕೇಟಗಳು ಮಾರುಕಟ್ಟೆಯಲ್ಲಿ ಸಿಗುತ್ತದೆ ಎಂದರೆ ಸಾಕ್ಷಿಯು ಎಲ್ಲಿಯು ಸಿಗುವುದಿಲ್ಲ ಎಂದು ನುಡಿಯುತ್ತಾರೆ. ಇದೇ ಮುದ್ದೆಮಾಲು ಎಂದು ತೋರಿಸಲು ಸಂಕ್ಷಿಪವಾದ ವಿವರಗಳು ನಿಪಿ1 ರಲ್ಲಿ ಹಾಗೂ ಅಂತಿಮ ವರದಿಯಲ್ಲಿ ನಮೂದು ಆಗಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಹರಿದಿರುವ ಖಾಲಿ ಪ್ಲಾಸ್ಟಿಕ್ ಪಾಕೇಟಗಳು ಕಿರಾಣಿ ಅಂಗಡಿಯಲ್ಲಿ ಉಪಯೋಗಿಸುತ್ತಾರೆ ಎಂದರೆ ಸರಿಯಲ್ಲ. ಕಿರಾಣಿ ಅಂಗಡಿಯಲ್ಲಿ ಇದ್ದ ಪ್ಲಾಸ್ಟಿಕ್ ಕವರಗಳನ್ನು ತಂದು ನ್ಯಾಯಾಲಯಕ್ಕೆ ಹಾಜರುಪಡಿಸಿ ಇದೆ ದೊರೆತ ಮುದ್ದೆಮಾಲು ಎಂದು ತಪ್ಪಾಗಿ ತೋರಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಿರ್ಯಾದಿ ದಾಖಲಿಸಿದ್ದ ದಿನದಿಂದ 7-8 ತಿಂಗಳು ಆದ ನಂತರ ಈ ಪ್ರಕರಣದ ಆರೋಪಿತರನ್ನು ದಸ್ತಗಿರಿ ಮಾಡಲಾಗಿದೆ ಎಂದರೆ ಸಾಕ್ಷಿಯು ಸದರಿ ಆರೋಪಿತರು ತಲೆ ಮರಿಸಿಕೊಂಡು ಇದ್ದ ಕಾರಣ ತಡವಾಗಿ ದಸ್ತಗಿರಿ ಮಾಡಲಾಯಿತು ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ನಿಜವಾದ ಆರೊಪಿತರು ಸಿಗದೇ ಇದ್ದ ಕಾರಣ 7-8 ತಿಂಗಳ ನಂತರ ನ್ಯಾಯಾಲಯದ ಮುಂದೆ ಇರುವ ವ್ಯಕ್ತಿಗಳನ್ನು ದಸ್ತಗಿರಿ ಮಾಡಿ ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಆರೋಪಿಗೂ ಮತ್ತು ಮು.ಮಾ1 ರಲ್ಲಿರುವ ಮುದ್ದೆಮಾಲಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಹಾಜರುಪಡಿಸಿದ ಎಫ್ ಎಸ್ ಎಲ್ ವರದಿಯು ಸುಳ್ಳು ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿತರು ನಿಜವಾದ ಆರೋಪಿತರು ಇಲ್ಲದೇ ಇದ್ದರು ಸಹ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು-ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.